# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156
(ನ್ಯಾಕ್ ಮಾನ್ಯತೆ B+ ಗ್ರೇಡ್ – 2021)

# RANI CHANNAMMA UNIVERSITY,

VidyaSangama, National Highway – 04, Belagavi – 591156
(NAAC Accredited with B+ Grade - 2021)

E-mail: rcuregistrar@gmail.com
registrar@rcub.ac.in

**ಕುಲಸಚಿವರ ಕಾರ್ಯಾಲಯ**
**OFFICE OF THE REGISTRAR**

Website: www.rcub.ac.in
Phone No.: 0831-2565203


**ಪತ್ರ ಸಂ: ರಾಚವಿ/ಬೆಳಗಾವಿ/ಕುಸಕಾ/ಜಿಎಡಿ/2022–23/2237** **ದಿನಾಂಕ: 01–09–2022**

## ಪ್ರಕಟಣೆ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನಕ್ಕೊಳಪಡುವ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿಯ ಸ್ನಾತಕ (UG) ವಿಷಯಗಳಿಗೆ 2022–23 ನೇ ಶೈಕ್ಷಣಿಕ ಸಾಲಿನ ಹೆಚ್ಚುವರಿ ಬೋಧನಾ ಕಾರ್ಯಭಾರದ ನಿರ್ವಹಣೆಗಾಗಿ ಯುಜಿಸಿ ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ–2000ರ ನಿಯಮಾನುಸಾರ ಪೂರ್ಣಕಾಲಿಕ/ಅರೆಕಾಲಿಕ ತಾತ್ಕಾಲಿಕ ಅತಿಥಿ ಉಪನ್ಯಾಸಕರ ಸೇವೆಯನ್ನು ಪಡೆಯಲು ಈ ಕೆಳಕಾಣಿಸಿದ ವಿಷಯಗಳ ಬೋಧನಾ ಕಾರ್ಯಭಾರಕ್ಕನುಗುಣವಾಗಿ, ಈ ಕೆಳಗೆ ನಮೂದಿಸಲಾದ ಸಂಖ್ಯೆಗೆ ಅನುಗುಣವಾಗಿ ಅರ್ಹ ಅಭ್ಯರ್ಥಿಗಳಿಂದ ಮೌಖಿಕ ಸಂದರ್ಶನಕ್ಕೆ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ವೆಬ್‌ಸೈಟ್‌ನಲ್ಲಿ ಲಭ್ಯವಿರುವ Google Sheet ಲಿಂಕ್‌ನ್ನು ಬಳಸಿ ವಿವರಗಳನ್ನು ಭರ್ತಿ ಮಾಡಬೇಕು ಹಾಗೂ ಅರ್ಜಿ ನಮೂನೆಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ದ್ವಿ ಪ್ರತಿಯೊಂದಿಗೆ ಸಂದರ್ಶನಕ್ಕೆ ಹಾಜರಾಗುವುದು. ಸಂದರ್ಶನದ ದಿನಾಂಕವನ್ನು ನಂತರ ತಿಳಿಸಲಾಗುವುದು.

### ಅಗತ್ಯವಿರುವ ವಿಷಯವಾರು ತಾತ್ಕಾಲಿಕ ಅತಿಥಿ ಉಪನ್ಯಾಸಕರ ಅಂದಾಜು ಪಟ್ಟಿ

| ಕ್ರ.ಸಂಖ್ಯೆ | ವಿಷಯ | ಪೂರ್ಣಕಾಲಿಕ | ಅರೆಕಾಲಿಕ |
|---|---|---|---|
| 1 | ಕನ್ನಡ | 3 | – |
| 2 | ಇಂಗ್ಲೀಷ್ | 3 | – |
| 3 | ಅರ್ಥಶಾಸ್ತ್ರ | 1 | 1 |
| 4 | ಇತಿಹಾಸ | 2 | 1 |
| 5 | ರಾಜ್ಯಶಾಸ್ತ್ರ | 1 | 1 |
| 6 | ಸಮಾಜಶಾಸ್ತ್ರ | 1 | 1 |
| 7 | ಭೂಗೋಳಶಾಸ್ತ್ರ | 3 | 1 |
| 8 | ಹಿಂದಿ | 1 | – |
| 9 | ವಾಣಿಜ್ಯಶಾಸ್ತ್ರ | 7 | 1 |
| 10 | ವ್ಯವಹಾರ ನಿರ್ವಹಣೆ | **3** | **1** |
| 11 | ಗಣಕ ವಿಜ್ಞಾನ | 4 | – |
| 12 | ಭೌತಶಾಸ್ತ್ರ | 3 | – |
| 13 | ರಸಾಯನಶಾಸ್ತ್ರ | 4 | **1** |
| 14 | ಗಣಿತಶಾಸ್ತ್ರ | 2 | **1** |
| 15 | ದೈಹಿಕ ಶಿಕ್ಷಣ | 1 | **1** |
| | ಒಟ್ಟು | **39** | **10** |

**ಅಭ್ಯರ್ಥಿಗಳಿಗೆ ಸೂಚನೆಗಳು:**

1. ಈ ಹುದ್ದೆಗಳು ಸಂಪೂರ್ಣ ತಾತ್ಕಾಲಿಕವಾಗಿದ್ದು, ಯಾವುದೇ ಮಂಜೂರಾದ ಹುದ್ದೆಗಳಿಗೆ ಎದುರಾಗಿ ಇರುವುದಿಲ್ಲ ಹಾಗೂ ಸೂಚಿಸಲಾದ ಹುದ್ದೆಗಳ ಸಂಖ್ಯೆಯು ತಾತ್ಕಾಲಿಕವಾಗಿದ್ದು ಕಾರ್ಯಭಾರದ ಅನುಗುಣವಾಗಿ ವ್ಯತ್ಯಾಸವಾಗಬಹುದು.
2. ಘಟಕ ಮಹಾವಿದ್ಯಾಲಯದ ವಿವಿಧ ಸ್ನಾತಕ ವಿಷಯಗಳ ಕಾರ್ಯಭಾರದ ಅಗತ್ಯತೆಗನುಗುಣವಾಗಿ ಹಾಗೂ ಸಧ್ಯದಲ್ಲಿ ಜಾರಿಯಲ್ಲಿರುವ ಸರ್ಕಾರದ ಮೀಸಲಾತಿ ಮತ್ತು ಯು.ಜಿ.ಸಿ ನಿಯಮಾವಳಿ ಅನುಸಾರ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲಾಗುವುದು.
3. ವಿದ್ಯಾರ್ಹತೆ ಹಾಗೂ ಜಾತಿ/ವರ್ಗ ಪ್ರಮಾಣ ಪತ್ರಗಳಿಗೆ ಸಂಬಂಧಪಟ್ಟ ಅಧಿಕೃತ ದಾಖಲಾತಿಗಳ ಧೃಢೀಕರಣ ಪ್ರತಿಗಳನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಲಗತ್ತಿಸತಕ್ಕದ್ದು.
4. ನಿಗದಿತ ಅರ್ಜಿ ನಮೂನೆಗಳನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.rcub.ac.in ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು.
5. ವೆಬ್‌ಸೈಟ್‌ನಲ್ಲಿ ಲಭ್ಯವಿರುವ Google Sheet ಲಿಂಕ್‌ನಲ್ಲಿ ವಿವರಗಳನ್ನು ಭರ್ತಿ ಮಾಡಲು **09–09–2022** ಕೊನೆಯ ದಿನಾಂಕವಾಗಿರುತ್ತದೆ.
6. ಆಯ್ಕೆಯಾದ ಅತಿಥಿ ಉಪನ್ಯಾಸಕರ ಸಂಭಾವನೆಯನ್ನು ವಿಶ್ವವಿದ್ಯಾಲಯದ ನಿಯಮಾನುಸಾರ ನೀಡಲಾಗುವುದು.
7. ಈ ಸಂದರ್ಶನಕ್ಕಾಗಿ ಆಗಮಿಸಿದ ಅಭ್ಯರ್ಥಿಗಳಿಗೆ ವಿಶ್ವವಿದ್ಯಾಲಯದಿಂದ ಯಾವುದೇ ತೆರನಾದ ಭತ್ಯೆಗಳನ್ನು ನೀಡಲಾಗುವುದಿಲ್ಲ.
8. ಅತಿಥಿ ಉಪನ್ಯಾಸಕರ ನೇಮಕಾತಿಯನ್ನು ಕರ್ನಾಟಕ ಸರ್ಕಾರದ ರೋಸ್ಟರ್ ನಿಯಮಗಳನುಸಾರ ಮಾಡಲಾಗುವುದು.
9. ತಾತ್ಕಾಲಿಕ ಅತಿಥಿ ಉಪನ್ಯಾಸಕರ ನೇಮಕಕ್ಕೆ ಸಂದರ್ಶನ ನಡೆಸುವುದು ವಿಶ್ವವಿದ್ಯಾಲಯದ ವಿವೇಚನೆಗೆ ಒಳಪಟ್ಟಿರುತ್ತದೆ.

ವಿಶ್ವವಿದ್ಯಾಲಯದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ ಮಾಳಮಾರುತಿ ಬಡಾವಣೆ, ಬೆಳಗಾವಿ, ಇಲ್ಲಿ ಮೌಖಿಕ ಸಂದರ್ಶನಕ್ಕೆ (Walk in Interview) **ಭರ್ತಿ ಮಾಡಿದ** ದ್ವಿ–ಪ್ರತಿ ಅರ್ಜಿಗಳೊಂದಿಗೆ ಹಾಜರಾಗುವಂತೆ ತಿಳಿಸಲಾಗಿದೆ.

**ವಿಶೇಷ ಸೂಚನೆ: ಸಂದರ್ಶನದ ಸಮಯಕ್ಕಿಂತ ಒಂದು ಗಂಟೆ ಮುಂಚಿತವಾಗಿ ಅಭ್ಯರ್ಥಿಗಳ ದಾಖಲೆಗಳನ್ನು ಪರಿಶೀಲಿಸಲಾಗುವುದು.**

**ಆದೇಶದ ಮೇರೆಗೆ**
**ಸಹಿ/–**
**ಕುಲಸಚಿವರು**